# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 596

ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 20.08.2026

ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರತಿ ಪೊಲೀಸ್ ವೃತ್ತದಲ್ಲೂ ರೌಡಿ ನಿಗ್ರಹ ದಳವನ್ನು ರಚಿಸಲಾಗಿದೆಯೇ; ರಚಿಸಲಾಗಿದ್ದರೆ ರೌಡಿ ನಿಗ್ರಹದಲ್ಲಿ ಇವುಗಳ ಪಾತ್ರವೇನು; | ಸ್ಥಾಯಿ ಆದೇಶ ಸಂಖ್ಯೆ 1003 ರನ್ವಯ ಬೆಂಗಳೂರು ನಗರದ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ರೌಡಿ/ರೌಡಿ ಗ್ಯಾಂಗ್ ಚಟುವಟಿಕೆಗಳ ನಿಯಂತ್ರಣಕ್ಕಾಗಿ ಪ್ರತಿ ಪೊಲೀಸ್ ಠಾಣೆಯಲ್ಲಿಯೂ ಸಹ ರೌಡಿ ನಿಗ್ರಹ ದಳ (Anti-Rowdy Squad) ವನ್ನು ರಚಿಸಲಾಗಿದ್ದು, ಈ ಕೆಳಕಂಡ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ನಿಗದಿಪಡಿಸಲಾಗಿರುತ್ತದೆ.<br><br>ರೌಡಿ ದಳಗಳ ಕರ್ತವ್ಯಗಳು<br><br>• ಠಾಣೆಯಲ್ಲಿ ದಾಖಲಾಗುವ ಅಪರಾಧ ಪ್ರಕರಣಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಕಡ್ಡಾಯವಾಗಿ ಹೊಸ ರೌಡಿ ಶೀಟ್‌ಗಳನ್ನು ತೆರೆಯುವ ಕ್ರಮ ಕೈಗೊಳ್ಳುವುದು.<br><br>• ವ್ಯಾಪ್ತಿಯಲ್ಲಿರುವ ಎಲ್ಲಾ ರೌಡಿ ಶೀಟರ್‌ಗಳು ಮತ್ತು ಸಮಾಜವಿರೋಧಿ ಅಂಶಗಳ ಬಗ್ಗೆ ಸವಿಸ್ತಾರ ಮಾಹಿತಿಯನ್ನು ನಿರ್ವಹಿಸುವುದು.<br><br>• ರೌಡಿ ಶೀಟರ್‌ಗಳ ಚಟುವಟಿಕೆಗಳು, ಸಂಚಾರ ಮತ್ತು ಸಂಪರ್ಕಗಳ ಬಗ್ಗೆ ಕಾಲಕಾಲಕ್ಕೆ ನಿಯಮಿತವಾಗಿ ನಿಗಾ ಹಾಗೂ ಪರಿಶೀಲನೆ ನಡೆಸುವುದು.<br><br>• ಹೊಸದಾಗಿ ಠಾಣಾ ವ್ಯಾಪ್ತಿಯಲ್ಲಿ ಪ್ರಾಬಲ್ಯ ಹೊಂದಲು ಯತ್ನಿಸುತ್ತಿರುವ ರೌಡಿ/ರೌಡಿ ಗ್ಯಾಂಗ್ ಗಳು ಹಾಗೂ ಅಪರಾಧ ಗುಂಪುಗಳನ್ನು ಗುರುತಿಸಿ, ಕಾರ್ಯಾಚರಣೆಗೊಳಿಸಬಹುದಾದ ಗುಪ್ತ ಮಾಹಿತಿಯನ್ನು ಸಂಗ್ರಹಿಸುವುದು.<br><br>• ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಗೆ ಧಕ್ಕೆ ಉಂಟುಮಾಡುವ ಪುನರಾವರ್ತಿತ ಅಪರಾಧಗಳಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಮೇಲೆ ನಿರಂತರ ನಿಗಾ ಇಡುವುದು<br><br>• ಸಮಾಜದ ಶಾಂತಿ ಸುವ್ಯವಸ್ಥೆಗಾಗಿ ರೌಡಿ ಆಸಾಮಿಗಳ ವಿರುದ್ಧ PAR, Goonda Act, KCOCA Act ಹಾಗೂ ಗಡಿಪಾರು (Externment) ಕ್ರಮಗಳಂತಹ ಅಪರಾಧ ತಡೆಗಟ್ಟುವ ಕಾನೂನು ಕ್ರಮಗಳನ್ನು ಕೈಗೊಳ್ಳುವುದು.<br><br>• ರೌಡಿ ಅಂಶಗಳ ವಿರುದ್ಧ ಇರುವ ವಾರಂಟ್‌ಗಳು, ಬಾಂಡ್‌ಗಳು ಮತ್ತು ಇತರ ಕಾನೂನು ಕ್ರಮಗಳನ್ನು ಪರಿಣಾಮಕಾರಿಯಾಗಿ |

ಜಾರಿಗೊಳಿಸುವುದು.

- ರೌಡಿ ಚಟುವಟಿಕೆಗೆ ಸಂಬಂಧಿಸಿದಂತೆ ಬೀಟ್ ಸಿಬ್ಬಂದಿ ಹಾಗೂ ಸ್ಥಳೀಯ ಗುಪ್ತಚರ ಮೂಲಗಳೊಂದಿಗೆ ನಿಕಟ ಸಂಪರ್ಕ ಕಾಯ್ದುಕೊಳ್ಳುವುದು.

- ಸೂಕ್ಷ್ಮ ಪ್ರದೇಶಗಳಲ್ಲಿ ವಿಶೇಷ ಕಾರ್ಯಾಚರಣೆಗಳು ಹಾಗೂ ಅಚ್ಚರಿ ತಪಾಸಣೆ (Special Drive) ಗಳನ್ನು ನಡೆಸುವುದು.

**ಹೊಣೆಗಾರಿಕೆ (Accountability)**

- ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ಠಾಣಾಧಿಕಾರಿ (SHO) ಪ್ರತಿ ಹದಿನೈದು ದಿನಗಳಿಗೊಮ್ಮೆ ರೌಡಿ ದಳಗಳ ಕಾರ್ಯನಿರ್ವಹಣೆಯನ್ನು ವೈಯಕ್ತಿಕವಾಗಿ ಪರಿಶೀಲಿಸುವುದು.
- ಸಹಾಯಕ ಪೊಲೀಸ್ ಆಯುಕ್ತರವರುಗಳು ಮಾಸಿಕ ಅಪರಾಧ ಸಭೆಗಳಲ್ಲಿ ರೌಡಿ ದಳಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸುವುದು

**ದಾಖಲಾತಿ ಮತ್ತು ವರದಿ (Documentation and Reporting)**

- ರೌಡಿ ದಳಗಳ ಚಟುವಟಿಕೆಗಳು ಹಾಗೂ ಸಾಧನೆಗಳನ್ನು ದಾಖಲಿಸಲು ಪ್ರತ್ಯೇಕ ರಿಜಿಸ್ಟರ್ ನಿರ್ವಹಿಸುವುದು.

- ರೌಡಿ ದಳಗಳ ಚಟುವಟಿಕೆಗಳ ಮೇಲೆ ನಿಗಾವಹಿಸಿದ ಕುರಿತು, ಮುಂಜಾಗ್ರತಾ ಕ್ರಮಗಳು, ಜಾರಿಗೊಳಿಸಿದ ವಾರಂಟ್‌ಗಳು, ಪರಿಶೀಲಿಸಿದ ರೌಡಿ ಶೀಟ್‌ಗಳು ಹಾಗೂ ಇತರ ಜಾರಿ ಕ್ರಮಗಳ ವಿವರಗಳಿರುವ ಮಾಸಿಕ ವರದಿಗಳನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು.

**ಶೂನ್ಯ ಸಹಿಷ್ಣುತೆ ನೀತಿ (Zero Tolerance Policy)**

- ರೌಡಿಸಂ ಹಾಗೂ ಸಮಾಜವಿರೋಧಿ ಚಟುವಟಿಕೆಗಳ ವಿರುದ್ಧ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸುವುದು ಬೆದರಿಕೆ, ಸುಲಿಗೆ, ಬಲವಂತದ ವಸೂಲಿ, ಸಾರ್ವಜನಿಕ ಅಶಾಂತಿ, ಗ್ಯಾಂಗ್ ಚಟುವಟಿಕೆ ಅಥವಾ ರೌಡಿ ಅಂಶಗಳಿಂದ ನಡೆಯುವ ಯಾವುದೇ ಕಾನೂನುಬಾಹಿರ ಕೃತ್ಯಗಳಿಗೆ ಸಂಬಂಧಿಸಿದಂತೆ ಕಾನೂನಿನ ಪ್ರಕಾರ ತ್ವರಿತವಾಗಿ ಕ್ರಮ ಕೈಗೊಳ್ಳುವುದು.

ಆ ನಗರದ ಹಲವು ರೌಡಿಗಳು ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಕೊಂಡು ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಇವುಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ರೌಡಿಗಳು ರಿಯಲ್ ಎಸ್ಟೇಟ್‌ನಲ್ಲಿ ತೊಡಗಿಕೊಂಡು ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಪ್ರಕರಣಗಳು ದಾಖಲಾಗಿದ್ದು, ವಿವರ ಕೆಳಗಿನಂತಿದೆ:

| ಕ್ರಸಂ | ಘಟಕ | ಪೊಲೀಸ್ ಠಾಣೆ | ಮೊಕದ್ದಮೆ ಸಂಖ್ಯೆ ಮತ್ತು ಕಲಂ |
|---|---|---|---|
| 1 | ಮೈಸೂರು ನಗರ | ಮೇಟಗಳ್ಳಿ | 138/2024 ಕಲಂ 103(1), 351(2), 49, 493(5) BNS 3(1)(r), SC-ST Act |
| | | | 31/2025 ಕಲಂ 109(1), 126(2), |

| | | |
|---|---|---|
| | | 2 \| ದಾವಣಗೆರೆ \| ಕೆಟಿಜೆ ನಗರ \| 3(5), 329(3), 351(2), 352 ಬಿಎನ್‌ಎಸ್ ಆಕ್ಟ್ ದಿನಾಂಕ: 30.05.2025 ರಂದು "ಬಿ" ಅಂತಿಮ ವರದಿ ಸಲ್ಲಿಸಲಾಗಿದ್ದು, ಸದರಿ ರೌಡಿ ಸಂತೋಷ್ ಕುಮಾರ @ ಕಣುಮ ಮೃತ ಪಟ್ಟಿರುತ್ತಾನೆ. |
| ಇ | ಕೆಲವು ರೌಡಿಗಳು ಸರ್ಕಾರಿ ಆಸ್ತಿ ಕಬಳಿಕೆ ಮತ್ತು ಸುಳ್ಳು ದಾಖಲೆ ಸೃಷ್ಟಿಯಂತಹ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದು, ಅವರ ಮೇಲೆ ಪೊಲೀಸರು ಸ್ವಯಂ ಪ್ರೇರಿತರಾಗಿ ದೂರು ದಾಖಲಿಸಲು ಅವಕಾಶವಿದೆಯೇ, ಇದ್ದಲ್ಲಿ ಸದರಿ ವಿಧಾನವನ್ನು ತಿಳಿಸುವುದು | ಕಾನೂನಿನ ಅಡಿಯಲ್ಲಿ ಸ್ಥಳೀಯ ಮಾಲೀಕರು ದೂರು ದಾಖಲಿಸಿದರೆ, ಸದರಿ ದೂರನ್ನು ದಾಖಲಿಸಿಕೊಂಡು ಕಾನೂನು ರೀತಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಅವಕಾಶವಿರುತ್ತದೆ. ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲು ಅವಕಾಶವಿರುವುದಿಲ್ಲ. |
| ಈ | ರೌಡಿಗಳು ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿ ಇತರರ ಆಸ್ತಿಗಳ ಮಾಹಿತಿಯನ್ನು ನಿಯಮಬಾಹಿರವಾಗಿ ಪಡೆದು ಸಾರ್ವಜನಿಕರಿಗೆ ಕಿರುಕುಳ ನೀಡುತ್ತಿದ್ದಲ್ಲಿ ಅಕ್ರಮವಾಗಿ ಮಾಹಿತಿ ನೀಡಿ ರೌಡಿಗಳನ್ನು ಉತ್ತೇಜಿಸುತ್ತಿರುವ ಸರ್ಕಾರಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಅವಕಾಶವಿದೆಯೇ, ಇದ್ದಲ್ಲಿ ಸಾರ್ವಜನಿಕರು ಯಾವ ಅಧಿಕಾರಿಗಳಿಗೆ ದೂರು ನೀಡಬೇಕು; | ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾಹಿತಿ ಹಕ್ಕು ಕಾಯ್ದೆಯ ದುರುಪಯೋಗ ಮತ್ತು ಅಪರಾಧ ಕೃತ್ಯಗಳಿಗೆ ಬೆಂಬಲ ನೀಡುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿದೆ.<br><br>**ಅಧಿಕಾರಿಗಳ ಮೇಲಿನ ಕ್ರಮ:**<br><br>RTI ಕಾಯ್ದೆಯಡಿ ವೈಯಕ್ತಿಕ ಮಾಹಿತಿ/ಖಾಸಗಿ ಆಸ್ತಿಗಳ ಮಾಹಿತಿಯನ್ನು (ವಿಶೇಷವಾಗಿ ಸೆಕ್ಷನ್ 8(1)0) ಅಡಿಯಲ್ಲಿ ವಿನಾಯಿತಿ ಇರುವ ಮಾಹಿತಿ) ಅಕ್ರಮವಾಗಿ ನೀಡುವ ಅಥವಾ ರೌಡಿಗಳಿಗೆ ದುಷ್ಕೃತ್ಯಕ್ಕೆ ಸಹಾಯ ಮಾಡುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ (PIO) ವಿರುದ್ಧ ಇಲಾಖಾ ವಿಚಾರಣೆ (Departmental Enquiry) ಹಾಗೂ ಅಪರಾಧಕ್ಕೆ ಪ್ರಚೋದನೆ/ ಬೆಂಬಲ ನೀಡಿದ ಆರೋಪದಡಿಯಲ್ಲಿ ಕಾನೂನು ಕ್ರಮ ಜರುಗಿಸಲು ಅವಕಾಶವಿದೆ.<br><br>**ಸಾರ್ವಜನಿಕರು ದೂರು ನೀಡಬೇಕಾದ ಅಧಿಕಾರಿಗಳು:**<br><br>ಸಂಬಂಧಪಟ್ಟ ಇಲಾಖೆಯ ಮೇಲಾಧಿಕಾರಿ / ಅಪೀಲೇಟ್ ಪ್ರಾಧಿಕಾರ (First Appellate Authority)<br><br>ಕರ್ನಾಟಕ ಮಾಹಿತಿ ಆಯೋಗ (KIC) ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಅಥವಾ ಸಂಬಂಧಿಸಿದ ಪೊಲೀಸ್ ಠಾಣೆ / ಲೋಕಾಯುಕ್ತ (Lokayukta) (ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರ ಸಂಬಂಧದಲ್ಲಿ) ದೂರು ನೀಡಬಹುದು. |
| ಉ | ರೌಡಿಗಳ ಚಟುವಟಿಕೆಗಳ/ ಕಿರುಕುಳದ ಬಗ್ಗೆ ದೂರು ನೀಡಲು ಸಾರ್ವಜನಿಕರು ಜೀವ ಭಯದಿಂದ ನೇರವಾಗಿ ದೂರು ನೀಡಲು ಹಿಂಜರಿಯುವ ಕಾರಣ ದೂರುದಾರರ ಮಾಹಿತಿಯನ್ನು ಗೌಪ್ಯವಾಗಿ ಇಡಲು ಸರ್ಕಾರ ಕೈಗೊಳ್ಳುವ ಕ್ರಮವೇನು; | ರೌಡಿಗಳ ಬೆದರಿಕೆ ಹಾಗೂ ಜೀವ ಭಯದಿಂದಾಗಿ ಸಾರ್ವಜನಿಕರು ದೂರು ನೀಡಲು ಮುಂದೆ ಬರುವುದಿಲ್ಲ ಎಂಬುದನ್ನು ಮನಗಂಡು, ದೂರುದಾರರ ಜೀವ ರಕ್ಷಣೆ ಮತ್ತು ಮಾಹಿತಿಯ ಗೌಪ್ಯತೆಗಾಗಿ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಹಲವು ವಿಶೇಷ ಕಾನೂನು ಮತ್ತು ತಾಂತ್ರಿಕ ವ್ಯವಸ್ಥೆಗಳನ್ನು ಜಾರಿಗೆ ತಂದಿದೆ. ಸಾಕ್ಷಿದಾರರ/ ಮಾಹಿತಿದಾರರ ವಿವರಗಳ ಗೌಪ್ಯತೆ ಕಾಪಾಡಲು ಅವಕಾಶವಿದೆ. ಸಾರ್ವಜನಿಕರಲ್ಲಿ ಆತ್ಮವಿಶ್ವಾಸ ಮೂಡಿಸಲು ಹಾಗೂ ದೂರುದಾರರ ಸುರಕ್ಷತೆಗೆ ಸರ್ಕಾರ ಮತ್ತು ಪೊಲೀಸ್ ಇಲಾಖೆ ಅತ್ಯಂತ ಆದ್ಯತೆ ನೀಡಿದೆ.<br><br>**ಗೌಪ್ಯ ಮಾಹಿತಿ ಸ್ವೀಕಾರ ವ್ಯವಸ್ಥೆ:** ರೌಡಿಗಳ ಕಿರುಕುಳ ಅಥವಾ ಅಕ್ರಮ ಚಟುವಟಿಕೆಗಳ ಕುರಿತು ಮಾಹಿತಿ ನೀಡುವ ದೂರುದಾರರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳನ್ನು ಸಂಪೂರ್ಣವಾಗಿ ಗೌಪ್ಯವಾಗಿ (Confidential) ಕಾಯ್ದುಕೊಳ್ಳಲಾಗುತ್ತದೆ.<br><br>**ವಿಶೇಷ ಸಹಾಯವಾಣಿ ಮತ್ತು ಆನ್‌ಲೈನ್ ದೂರು:** ಸಾರ್ವಜನಿಕರು ನೇರವಾಗಿ ಠಾಣೆಗೆ ಬರದೇ ಇಲಾಖೆಯ ಉಚಿತ ಸಹಾಯವಾಣಿ (112), ಆನ್‌ಲೈನ್ ಪೋರ್ಟಲ್ ಅಥವಾ ಇ-ಮೇಲ್ ಮೂಲಕ ಗೌಪ್ಯವಾಗಿ ಮಾಹಿತಿ ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>**ದೂರುದಾರರ ರಕ್ಷಣೆ (Witness/ Complainant** |

| | | |
|---|---|---|
| | | **Protection):** ದೂರುದಾರರಿಗೆ ಜೀವ ಬೆದರಿಕೆ ಇರುವ ಸಂದರ್ಭಗಳಲ್ಲಿ ಸೂಕ್ತ ಪೊಲೀಸ್ ರಕ್ಷಣೆ ಒದಗಿಸುವ ಮತ್ತು ಅವರ ಗುರುತು ಬಹಿರಂಗಗೊಳ್ಳದಂತೆ ಕಾನೂನು ಕ್ರಮ ಜರುಗಿಸುವ ವ್ಯವಸ್ಥೆ ಮಾಡಲಾಗಿದೆ.<br><br>**ಪೊಲೀಸ್ ಇಲಾಖೆಯ ಆಪ್ ಮತ್ತು ವೆಬ್‌ಸೈಟ್‌ಗಳು:** ಪೊಲೀಸ್ ಇಲಾಖೆಯ ಅಧಿಕೃತ ಆಪ್‌ಗಳು ಅಥವಾ ವೆಬ್ ಪೋರ್ಟಲ್‌ಗಳ ಮೂಲಕ "Anonymous" Complaint" (ಅನಾಮಧೇಯ ದೂರು) ರೂಪದಲ್ಲಿ ದೂರು ದಾಖಲಿಸಬಹುದು. |
| ಊ) | ರೌಡಿಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರೌಡಿಗಳ ಚಟುವಟಿಕೆಗಳನ್ನು ತಡೆಗಟ್ಟಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಇಲಾಖೆಯಿಂದ ಈ ಕೆಳಗಿನ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>• **ಪ್ರತಿ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್‌ಗಳ ನಿರಂತರ ಸರ್ವೇಕ್ಷಣೆ:** ಪ್ರತಿಯೊಂದು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ರೌಡಿ ಶೀಟರ್‌ಗಳ ಪಟ್ಟಿಯನ್ನು ನಿಯಮಿತವಾಗಿ ಪರಿಶೀಲಿಸಿ (Rowdy Parade), ಅವರ ಪ್ರಸ್ತುತ ಚಟುವಟಿಕೆಗಳ ಮೇಲೆ ತೀವ್ರ ನಿಗಾ ವಹಿಸಲಾಗುತ್ತಿದೆ.<br><br>• **ಮುನ್ನೆಚ್ಚರಿಕೆ ಕ್ರಮ ಮತ್ತು ಗಡಿಪಾರು:** ಪ್ರತಿ ಪೊಲೀಸ್ ಠಾಣೆಯಲ್ಲಿ ಸಮಾಜದ ಶಾಂತಿಗೆ ಭಂಗ ತರುವ ಹಾಗೂ ನಿರಂತರ ಅಪರಾಧ ಚಟುವಟಿಕೆಗಳಲ್ಲಿ ತೊಡಗುವ ರೌಡಿಗಳ ವಿರುದ್ಧ ಮುನ್ನೆಚ್ಚರಿಕೆ ಬಂಧನ (Preventive Detention) ಹಾಗೂ ಕಾನೂನಾತ್ಮಕವಾಗಿ ಗಡಿಪಾರು (Externment) Order) ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ<br><br>• **ಪ್ರತಿ ಪೊಲೀಸ್ ಠಾಣೆಯಲ್ಲಿ ಸಂಘಟಿತ ಅಪರಾಧಗಳ ತಡೆ:** ರೌಡಿಗಳು ನಡೆಸುವ ಹಫ್ತಾ ವಸೂಲಿ, ರಿಯಲ್ ಎಸ್ಟೇಟ್ ದಂಧೆ ಮತ್ತು ಬೆದರಿಕೆ ಕರೆಗಳ ವಿರುದ್ಧ ತಕ್ಷಣವೇ ಕಠಿಣ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕಳೆದ ನಾಲ್ಕು ವರ್ಷಗಳಲ್ಲಿ ರೌಡಿಗಳ ವಿರುದ್ಧ ಜರುಗಿಸಲಾದ ಕ್ರಮದ ವಿವರ. |

| Year | No. of Cases on Rowdy Sheeters | No. of Externment on Rowdy Sheeters done | No. of Goonda Act on Rowdy Sheeters | No. KCOCA on Rowdy Sheeters |
|---|---|---|---|---|
| 2023 | 11929 | 608 | 54 | 3 |
| 2024 | 11561 | 813 | 31 | 6 |
| 2025 | 9819 | 662 | 40 | 34 |
| 2026 (31.07.26) | 8430 | 527 | 53 | 42 |

ಹೆಚ್‌ಡಿ 451 ಎಸ್‌ಎಸ್‌ಟಿ 2026

([illegible])
ಗೃಹ ಸಚಿವರು